## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

## ಸಿ ಸಿ ನಂ.1384/2018

ಫಿರ್ಯಾದುದಾರರು :- ರಾಜ್ಯ ಪೋಲೀಸರು, ಮಳವಳ್ಳಿ ಪುರ ಪೊಲೀಸ್ ಠಾಣೆ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

: ವಿರುದ್ಧ :

ಆರೋಪಿತರು :-
1) ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ಕೆಂಪಶೆಟ್ಟಿ ,
   65 ವರ್ಷಗಳು
2) ಶ್ರೀಮತಿ ತುಳಸಿ ಕೋಂ ಲೇಟ್ ಬೀರಪ್ಪ,
   40 ವರ್ಷಗಳು
3) ಶ್ರೀ ಮಂಜು ಬಿನ್ ಲೇಟ್ ಕೆಂಪಶೆಟ್ಟಿ,
   35 ವರ್ಷಗಳು
4) ಶ್ರೀ ಶ್ರೀನಿವಾಸ ಬಿನ್ ಲೇಟ್ ಕೆಂಪಶೆಟ್ಟಿ,
   40 ವರ್ಷಗಳು

ಎಲ್ಲರ ವಾಸ : ಸಣ್ಣಮಲ್ಲೇಗೌಡರ ಬೀದಿ,
ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ.

## -: ದೋಷಾರೋಪಣೆ :-

ಸಚಿನ್ ಕುಮಾರ್ ಶಿವಪೂಜಿ, ಬಿ.ಎ.ಎಲ್., ಎಲ್ ಎಲ್ ಬಿ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮಗಳ ವಿರುದ್ಧ ಹೊರಸಿರುವ ದೋಷಾರೋಪಣೆ ಏನೆಂದರೆ :

ದಿನಾಂಕ: 06.07.2015 ರಂದು ಸಾಕ್ಷಿ-01 ಮತ್ತು ಸಾಕ್ಷಿ-02 ರವರು ಮಳವಳ್ಳಿ ನ್ಯಾಯಾಲಯದಲ್ಲಿ ಸಿವಿಲ್ ಕೇಸ್ ಸಂಬಂಧವಾಗಿ ಬೆಂಗಳೂರಿನಿಂದ ತಮ್ಮ ಸಂಬಂಧಿಕರಾದ ಸಾಕ್ಷಿ-03 ರವರ ಮನೆಗೆ ಬಂದಿದ್ದು, 1 ಮತ್ತು 2 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಏಕಾಏಕಿ ಮನೆಗೆ ಅಕ್ರಮ ಪ್ರವೇಶಿ ಮಾಡಿ ಭಾರತ ದಂಡ ಸಂಹಿತೆ ಕಲಂ.448 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 01 ರಿಂದ 4 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಸಾಕ್ಷಿ-1 ರವರಿಗೆ ಅವಾಚ್ಯ ಶಬ್ದಗಳಿಂದ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟಾಗುವಂತೆ ಬೈದು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 1 ಮತ್ತು 2 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ, ಸಾಕ್ಷಿ-01 ರವರನ್ನು ಎತ್ತಿಕೊಂಡು ಮನೆಯ ಹೊರಗೆ ಬಂದು ಮೈಮೇಲೆ ಕೈನಿಂದ ಮತ್ತು ಕಾಲಿನಿಂದ ಹಲ್ಲೆ ಮಾಡಿ, ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಹಾಗೂ

ಅದೇ ದಿನ ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ, 3 ಮತ್ತು 4 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಸಾಕ್ಷಿ-01 ರವರಿಗೆ " ಇವಳನ್ನು ಇಲ್ಲೇ ಮುಗಿಸಿಬಿಡಿ ಇನ್ನೂ ಮಳವಳ್ಳಿಗೆ ಬರಬಾರದು " ಎಂದು ಕೊಲೆ ಬೆದರಿಕೆ ಹಾಕಿ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿರುವಿರಿ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಮಳವಳ್ಳಿ.

ದಿನಾಂಕಃ12.07.2022

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**
**ಸಿ ಸಿ ನಂ.1384/2018**

**ಫಿರ್ಯಾದುದಾರರು ಃ- ಮಳವಳ್ಳಿ ಪುರ ಪೊಲೀಸ್ ಠಾಣೆ**

ಃ ವಿರುದ್ಧ ಃ

**ಆರೋಪಿ ಃ-**

**ಪ್ರಶ್ನೆಃ- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**
**ಉತ್ತರಃ-** ತಿಳಿಯಿತು
**ಪ್ರಶ್ನೆಃ- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**
**ಉತ್ತರಃ** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ದಿನಾಂಕಃ12.07.2022** **ಮಳವಳ್ಳಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**
**ಸಿ ಸಿ ನಂ.1384/2018**

**ಫಿರ್ಯಾದುದಾರರು ಃ- ಮಳವಳ್ಳಿ ಪುರ ಪೊಲೀಸ್ ಠಾಣೆ**

ಃ ವಿರುದ್ಧ ಃ

**ಆರೋಪಿ ಃ-**

**ಪ್ರಶ್ನೆಃ- 1) ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?**
**ಉತ್ತರಃ-** ತಿಳಿಯಿತು
**ಪ್ರಶ್ನೆಃ- 2) ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?**
**ಉತ್ತರಃ** ವಿಚಾರಣೆಯಾಗಬೇಕು

**(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿ ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢಿಕರಿಸುತ್ತೇನೆ.)**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ದಿನಾಂಕಃ12.07.2022** **ಮಳವಳ್ಳಿ.**